ಏಪ್ರಿಲ್94ರಲ್ಲಿ 6.3 ಎಂವಿಎ ಟ್ರಾನ್ಸ್ಫಾರ್ಮರ್ಗಳು ಬರುವ ನಿರೀಕ್ಷೆ ಇದೆ. ಸರಬರಾಜನಿಂದ ಬಂದ ತಕ್ಷಣ ಒಂದು 6.3 ಎಂವಿಎ ಪವರ್ ಟ್ರಾನ್ಸ್ಫಾರ್ಮರ್ನ್ನು ಅಕ್ಕೂರ್ ಮೇಲೆಗೆ ಕಳುಹಿಸಲಾಗುವುದು.

ಈ) 'ಇ' ಭಾಗದ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಉ) ಟ್ರಾನ್ಸ್ಮಿಷನ್ ಲೈನ್ ಕೆಲಸ ಮಾಡಲು ದಾರಿ ಸುಗಮವಾದ ತಕ್ಷಣವೇ ಈ ಉಪಕೇಂದ್ರವನ್ನು ಚಾಲನೆಗೊಳಿಸಲಾಗುವುದು.

ಚಿಕ್ಕಮಗಳೂರು ಬಳಿ ಕಣ್ವಾ ನದಿಗೆ ಅಡ್ಡಲಾಗಿ ವೆಂಟೆಡ್ ಡ್ಯಾಂ ನಿರ್ಮಿಸುವುದರ ಬಗ್ಗೆ

769 - ಶ್ರೀ ಸಾದತ್ ಆಲಿಖಾನ್ (ಚನ್ನಪಟ್ಟಣ): ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಚಿಕ್ಕಮಗಳೂರು ಬಳಿ ಕಣ್ವಾ ನದಿಗೆ ಅಡ್ಡಲಾಗಿ ವೆಂಟೆಡ ಡ್ಯಾಂ ನಿರ್ಮಿಸುವ ಬಗ್ಗೆ ಸರ್ಕಾರದಲ್ಲಿ ಪ್ರಸ್ತಾವನೆ ಬಾಕಿ ಉಳಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;*

ಆ) *ಹಾಗಿದ್ದಲ್ಲಿ 1994-95ನೇ ಸಾಲಿನ ಹಾಲಿ ಆಯವ್ಯಯದಲ್ಲಿ ಸೇರಿಸುವ ಬಗ್ಗೆ ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು?*

ಡಾ॥ *ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು):*

ಅ) ಪ್ರಸ್ತಾವನೆ ಸರ್ಕಾರದಲ್ಲಿ ಬಾಕಿ ಉಳಿದಿಲ್ಲ.

ಆ) ಇದನ್ನು ಪರಿಶೀಲಿಸಲಾಗುವುದು.

ಕೃಷ್ಣ ಡೆವಲಪ್ಮೆಂಟ್ ಅಥಾರಿಟಿ ಬಿಲ್ಲನ್ನು ಅನುಷ್ಠಾನ ಮಾಡುವ ಬಗ್ಗೆ

651 - ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ): ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕೃಷ್ಣಾ ಅಭಿವೃದ್ಧಿ ಪ್ರಾಧಿಕಾರದ ವಿಧೇಯಕವನ್ನು ವಿಧಾನ ಸಭೆಯಲ್ಲಿ ಯಾವಾಗ ಅಂಗೀಕರಿಸಲಾಯಿತು;*

ಆ) *ಅದನ್ನು ಕೇಂದ್ರ ಸರ್ಕಾರಕ್ಕೆ ಒಪ್ಪಿಗೆಗೆ ಯಾವಾಗ ಕಳುಹಿಸಲಾಯಿತು;*

ಇ) *ಇಲ್ಲಿಯವರೆಗೆ ಆ ವಿಧೇಯಕವನ್ನು ಅನುಷ್ಠಾನ ಮಾಡುವಲ್ಲಿ ವಿಳಂಬ ಆಗಿರುವುದಕ್ಕೆ. ಕಾರಣಗಳೇನು?*

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):

ಅ) ದಿನಾಂಕ 30-3-92 ರಂದು ಅಂಗೀಕರಿಸಲಾಯಿತು.

ಆ) ದಿನಾಂಕ 11-5-92 ರಂದು ಕಳುಹಿಸಲಾಯಿತು.

ಇ) ಕೇಂದ್ರ ಸರ್ಕಾರದ ಅನುಮೋದನೆಯನ್ನು ನಿರೀಕ್ಷಿಸಲಾಗಿದೆ.

ಸೇಡಂ ತಾಲ್ಲೂಕಿನ ಕಾಗಿನಾ ನದಿಯ ಮೇಲೆ ಕೆರೆ ನಿರ್ಮಾಣ ಕುರಿತು

737 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ): ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಗುಲ್ಬರ್ಗ ಜಿಲ್ಲೆಯ ಸೇಡಂ ತಾಲ್ಲೂಕಿನ ಕಾಗಿನಾ ನದಿಯ ಮೇಲೆ 2000 ಸಾಲಿನೊಳಗಾಗಿ ಕೆರೆ ನಿರ್ಮಾಣವಾಗುತ್ತದೆಂದು ಆ ಕೆರೆ ಒಳಗೆ ಕುಡುಕುಂಟಾ, ಹೈಯಾಳ್ ಇತ್ಯಾದಿ ಗ್ರಾಮಗಳ ಭೂಮಿ ಮುಳುಗಡೆಯಾಗುತ್ತದೆಂದು ಏತ ನೀರಾವರಿಗಾಗಿ ಅನುಮತಿ ನೀಡಲಾರದ್ದು, ನಿಜವೇ?*